ಸೇತುವೆಗಳನ್ನು ಅಭಿವೃದ್ಧಿಪಡಿಸುವುದು

40(198); ಡಾ॥ ಉಮೇಶ್ ಜಿ. ಜಾಧವ್ (ಚಿಂಚೋಳಿ)

ಅ) ಚಿಂಚೋಳಿ ತಾಲ್ಲೂಕಿನ ರಾಜ್ಯ ಹೆದ್ದಾರಿ–149 ರಲ್ಲಿ ಬರುವ ಚಿಂಚೋಳಿ ಹೆಚ್, ಹಳ್ಳ, ಕಲ್ಲಹಿಪ್ಪರಗಾ ಗ್ರಾಮದ ಹತ್ತಿರ ಬೆಣ್ಣೆತೋರಾ ಹಳ್ಳ ಹಾಗೂ ಚಿಂಚೋಳಿ ತಾಂಡೂರ ರಾಜ್ಯ ಹೆದ್ದಾರಿ ಮೇಲೆ ಬರುವ ಮಿರಿಯಾಣ ಗ್ರಾಮದ ಹತ್ತಿರ ಹಳ್ಳಗಳ ಸೇತುವೆಗಳು ಸಂಪೂರ್ಣವಾಗಿ ಹದಗೆಟ್ಟಿದ್ದು, ಇದರಿಂದ ಸಾರ್ವಜನಿಕರಿಗೆ ಮತ್ತು ವಾಹನ ಸವಾರರಿಗೆ ಮತ್ತು ವಿದ್ಯಾರ್ಥಿಗಳಿಗೆ ಪ್ರಯಾಣ ಮಾಡಲು ತೀರಾ ಅನಾನುಕೂವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಎಲ್ಲಾ ಹಳ್ಳಗಳಿಗೆ ಸೇತುವೆಗಳನ್ನು ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡಲಾಗಿದೆಯೇ; ಮಾಡದಿದ್ದಲ್ಲಿ, ಯಾವಾಗ ಬಿಡುಗಡೆ ಮಾಡಲಾಗುವುದು (ವಿವರ ನೀಡುವುದು)

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಬಂದಿದೆ.

ಆ) ಚಿಂಚೋಳಿ ತಾಲ್ಲೂಕಿನ ರಾಜ್ಯ ಹೆದ್ದಾರಿ– 149 ರ ಮೇಲೆ ಕಿ.ಮೀ. 125.00 ರಲ್ಲಿ (ಚಿಂಚೋಳಿ.ಹೆಚ್. ಹಳ್ಳಕ್ಕೆ) ಸೇತುವೆ ಹಾಗೂ ಕಲ್ಲಹಿಪ್ಪರಗಾ ಗ್ರಾಮದ ಹತ್ತಿರ ಸೇತುವೆ ನಿರ್ಮಿಸುವ ಪ್ರಸ್ತಾವನೆಗಳು ಪರಿಶೀಲನೆಯಲ್ಲಿದ್ದು ಅನುದಾನದ ಲಭ್ಯತೆಯನುಸಾರ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ತಾಂಡೂರ–ಮಿರಿಯಾಣ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ಸದರಿ ರಸ್ತೆಯ ಮೇಲೆ ಮಿರಿಯಾಣ ಗ್ರಾಮದ ಹತ್ತಿರ ಇರುವ ಸೇತುವೆಯು ಸುಸ್ಥಿತಿಯಲ್ಲಿದ್ದು, ಕೂಡು ರಸ್ತೆಗಳು ಮಾತ್ರ ಹಾಳಾಗಿದ್ದು, ಸದರಿ ಕೂಡು ರಸ್ತೆಗಳ ನಿರ್ಮಾಣ ಕಾರ್ಯವನ್ನು ಅಂತರರಾಜ್ಯ ಹೆದ್ದಾರಿ ಸಂಪರ್ಕ ಯೋಜನೆ ಅಡಿಯಲ್ಲಿ ರಾಷ್ಟ್ರೀಯ ಹೆದ್ದಾರಿ ವಿಭಾಗದಿಂದ ಕೈಗೊಳ್ಳಲಾಗಿದ್ದು, ಸದರಿ ಕಾಮಗಾರಿಯು ಪ್ರಗತಿಯಲ್ಲಿದೆ.